ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 94-97
©*IIMRD*, Mysuru

IIMRD JOURNALS
www.iimrd.com

# ಕಲಾವಿದ ಶಂಭುಲಿಂಗ ವಾಲ್ದೊಡ್ಡಿರವರ ಜೀವನ ಮತ್ತು ಸಾಧನೆ

**ಮಹಾಂತೇಶ ಕ್ರಿಷ್ಣಪ್ಪ***

* ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***ಸಾರಾಂಶ (Abstract)***

*ಅದಾವುದೊ ಒಳತುಡಿತ, ಕಾಲದ ಅನಿವಾರ್ಯತೆ, ಹಾಡಿನೊಳಗೆ ಮಹತ್ತರವಾದದ್ದನ್ನು ಸಾಧಿಸಬೇಕೆನ್ನುವ ಛಲ, ವಿಭಿನ್ನ, ವಿಶಿಷ್ಟ ದಾರಿಯಲ್ಲಿ ಸಾಗಬೇಕೆನ್ನುವ ತುರ್ತು ಹಾಗೂ ವರ್ತಮಾನಗಳು ತಂದ್ದೊಡ್ಡುತ್ತಿರುವ ಅವಾಂತರಗಳು, ಹಿಂದಿನವರ, ಹಿರಿಯರ, ಅನುಭವಗಳನ್ನು ಮುಂದಿಟ್ಟುಕೊಂಡು ಹೊಸ ಸಾಧ್ಯತೆ, ಹೊಸ ಚಿಂತನೆ, ಹೊಸ ಉಸಿರು, ಹೊಸ ಬಣ್ಣ ಇವೆಲ್ಲವೂ ನುಗ್ಗುಬರುವ ಸವಾಲುಗಳನ್ನು ಮೆಟ್ಟಿನಿಲ್ಲಲು ಆಧಾರವಿದ್ದಂತೆ ಸದಾ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿರುವ ಬೀದರ ಜಿಲ್ಲೆಯ ಹೆಸರಾಂತ ಕಲಾವಿದರಾದ ಶಂಭುಲಿಂಗ ವಾಲ್ದೊಡ್ಡಿರವರ ಜೀವನ ಮತ್ತು ಸಾಧನೆ ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.*

***ಮುಖ್ಯಪದಗಳು (Keywords)*:** ಜಾಗೃತ ಗೀತೆಗಳು, ಜಾನಪದ ಕಲಾವಿದ, ಬೆಳಗುವ ಬೆಳ್ಳಿ, ಶಂಭುಲಿಂಗ ವಾಲ್ದೊಡ್ಡಿ, ಸಂಜೆಗೆನ್ನ ಪಯಣ.

## ಪೀಠಿಕೆ

ಹೆಸರಾಂತ ಕಲಾವಿದರಾದ 'ಶಂಭುಲಿಂಗ ವಾಲ್ದೊಡ್ಡಿ'ಯವರು ಮೂಲತಃ ನಿವೃತ್ತ ಮುಖ್ಯ ಶಿಕ್ಷಕರು. ಬೀದರನ ವಾಲದೊಡ್ಡಿ ಎಂಬ ಗ್ರಾಮದವರಾದ ಶ್ರೀಯುತರು ಆಗಸ್ಟ್ 1, 1957 ರಂದು ಜನಿಸಿದರು. ಸದ್ಧಕ್ಕೆ ಇವರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳೊಂದಿಗೆ ತುಂಬು ಕುಟುಂಬದ ಜೀವನ ನಡೆಸುತಿದ್ದಾರೆ. ಆದರೆ ಇವರು ಹಿಂದೆ ಪಟ್ಟಂತಹ ನೋವು ಯಾತನೆ ಬಹಳಷ್ಟು. ಚಿಕ್ಕ ವಯಸ್ಸಿನಿಂದಲೇ ಇವರಿಗೆ ಹಾಡುವ, ಕಲಿಯುವ ಅಭಿರುಚಿ ಅಪಾರ. ಅಜ್ಜಿ ಮತ್ತು ತನ್ನ ತಾಯಿಯ ಹಾಡುಗಳನ್ನು ಅನುಸರಿಸಿ ಹಾಡನ್ನೇ ಜೀವನಾಡಿಯನ್ನಾಗಿ ಮೈಗೂಡಿಸಿಕೊಂಡು, ಜನಪದ ಹಾಡುಗಳಲ್ಲಿ ಅಪಾರವಾದ ಪ್ರಾಶಸ್ತ್ಯವನ್ನು ಪಡೆದು ಜನರ ಬಾಯಲ್ಲಿ ಅಚ್ಚಳಿಯದೇ ನೆಲೆನಿಂತಿದ್ದಾರೆ. ಪ್ರಾಯವಾದಂತೆ ಮದುವೆ ಕೂಡಿ ಬಂದಾಗ ಶಶಿಕಲಾ ಎನ್ನುವವರನ್ನು ಮದುವೆಯಾದರು. ನಂತರ ಈ ದಂಪತಿಗೆ ನಾಲ್ಕು ಮಕ್ಕಳು ಜನಿಸಿ, ಸುಖಿ ಸಂಸಾರ ನಡೆಸುವ ಹೊತ್ತಲ್ಲಿ ವಿಧಿಯಾಟ ಆವರಿಸಿದ ಹಾಗೆ ದೇಹಕ್ಕೆ ಪಾರ್ಶ್ವವಾಯು ಹೊಡೆದು ಹಾಸಿಗೆ ಹಿಡಿದರು. ಪ್ರಯತ್ನಪಟ್ಟರೂ ಪಡಬಾರದ ನೋವನ್ನು ಪಟ್ಟು ಪತಿ ಮತ್ತು ಮಕ್ಕಳನ್ನು ಬಿಟ್ಟು

*Please cite this article as:* *ಮಹಾಂತೇಶ ಕ್ರಿಷ್ಣಪ್ಪ. (2021).* ಕಲಾವಿದ ಶಂಭುಲಿಂಗ ವಾಲ್ದೊಡ್ಡಿರವರ ಜೀವನ ಮತ್ತು ಸಾಧನೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 94–97*

ಇಹಲೋಕ ತ್ಯಜಿಸಿದರು. ಮಕ್ಕಳ ಪಾಲನೆಗಾಗಿ ಶೋಭಾ ಎನ್ನುವವರನ್ನು ಜುಲೈ 11, 2000 ರಂದು ಮದುವೆಯಾಗಿ ಜೀವನ ಸಾಗಿಸುವ ಹೊತ್ತಲ್ಲಿ ಇವರೂ ಕೂಡ ಹೃದಯಾಘಾತದಿಂದ ಸಾವನ್ನಪ್ಪಿದರು. ಒಬ್ಬ ಮನುಷ್ಯನಿಗೆ ಎಲ್ಲಾ ಇದ್ದು ತನ್ನವರೆನ್ನುವ ಕಾಳಜಿ, ಮಮತೆ, ಪ್ರೀತಿ ತೋರಿಸುವ ಒಂದು ಜೀವನಾಡಿ ಇರದೇ ಇದ್ದಾಗ ಬದುಕು ಶೂನ್ಯ ಎನ್ನುವ ರೀತಿ ಭಾಸವಾಗುತ್ತದೆ. ಆದರೆ ಇವರು ಎದೆಗುಂದದೇ ಕಲೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟು ಉನ್ನತ ಸಾಧನೆ ಮಾಡಿ ಹೆಸರುವಾಸಿಯಾಗಿದ್ದಾರೆ.

ಜಗತ್ತಿನ ಜನರೆಲ್ಲಾ ಸೌಹಾರ್ದತೆಯ ರೀತಿಯಲ್ಲಿ ಜಾತಿ, ಮತ, ಪಂಥ ಬೇಧವಿಲ್ಲದೆ ಎಲ್ಲರೂ ಒಂದೆನ್ನುವ ರೀತಿಯಲ್ಲಿ ನಟನೆಯಲ್ಲಿ ಕೆಲಸ ಮಾಡಬೇಕು. ಜೊತೆಗೆ ಸಾಹಿತ್ಯ ನಿರ್ಮಾಣ ಅವಶ್ಯಕವಾದುದು ಎಂಬ ಅಭಿಪ್ರಾಯ ಹೊಂದಿರುವ ಇವರು ಕಲೆ ಕಲೆಗಾಗಿ ಅಲ್ಲ ಬದುಕಿಗಾಗಿ ಮತ್ತು ಜನರಿಗಾಗಿ ಎನ್ನುವ ಅಭಿಪ್ರಾಯ ಹೊಂದಿದ್ದು, ಪ್ರತಿ ಜಿಲ್ಲೆಯಲ್ಲೂ ಸಮುದಾಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹುಟ್ಟುಹಾಕುವಂತಹ ಕೆಲಸ ಮಾಡಬೇಕಿದ್ದು, ಅದಕ್ಕಾಗಿ ರಂಗಭೂಮಿಯನ್ನು ಮಾಧ್ಯಮವನ್ನಾಗಿ ಬಳಸಿಕೊಳ್ಳಬೇಕು ಹಾಗೂ ಸಮುದಾಯದಲ್ಲಿ ಜಾಥಾ ಪರಂಪರೆಯನ್ನು ಹುಟ್ಟುಹಾಕಬೇಕು ಎನ್ನುವ ಅಭಿಪ್ರಾಯವನ್ನೂ ಕೂಡ ಹೊಂದಿದ್ದಾರೆ. ಇವರು ಕೇವಲ ಮಾತನಾಡುತ್ತಿರಲಿಲ್ಲ ಅಥವ ಕೇವಲ ಸಲಹೆ ನೀಡುತ್ತಿರಲಿಲ್ಲ. ಬದಲಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ನುಡಿದಂತೆ ನಡೆ ಎನ್ನುವ ಜಾಯಮಾನದವರು. ವಾಲದೊಡ್ಡಿಯವರು ಬುದ್ಧ, ಬಸವ, ಅಂಬೇಡ್ಕರವರನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವ ಇವರು ಅಪ್ಪಟ ಶಿಕ್ಷಣ ಪ್ರೇಮಿ, ಉತ್ತಮ ಹಾಡುಗಾರರು ಜೊತೆಗೆ ಶಿಕ್ಷಣ ಕ್ಷೇತ್ರದಲ್ಲೂ ಅಪಾರ ಸಾಧನೆಗೈದವರು. ಇವರು ಎಂ.ಎ., ಎಲ್.ಎಲ್.ಬಿ., ಬಿ.ಇಡಿ., ಪಿಬಿಎಸ್ ಮುಗಿಸಿಕೊಂಡು ಕಳೆದ ಮೂರು ದಶಕಗಳಿಂದ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಮಕ್ಕಳ ಮನೋವಿಕಾಸ ಶೈಕ್ಷಣಿಕ ಅಭಿವೃದ್ಧಿಗೆ ದುಡಿಯುತ್ತಿರುವುದು ಶ್ಲಾಘನೀಯವಾದುದು.

ಅತ್ಯುತ್ತಮ ಹಾಡುಗಾರರಾದ ಇವರು; ಜನಪದ ಶೈಲಿಯ ಸಾಮಾಜಿಕ ಸಾಮರಸ್ಯಕ್ಕೆ ಕನ್ನಡಿ ಹಿಡಿದ ಜನಪ್ರಿಯರು. ಸಮಾನ ಸಮಾಜದ ಸಂದೇಶವನ್ನು ಹೊತ್ತಂತಹ ಹಾಡುಗಳಲ್ಲಿ ಹೆಚ್ಚು ಪ್ರಸಿದ್ಧರಾದವರು. ಜಪಾನ ದೇಶದಲ್ಲಿ ಪ್ರಚಲಿತವಿರುವ ಹಾಯ್ಕುಗಳ ಮಾದರಿಯಲ್ಲಿ ಕನ್ನಡದ ಅಕ್ಷರ ವೃತ್ತ ಮತ್ತು ಮಾತ್ರಾ ಛಂದಸ್ಸನ್ನು ಬಳಸಿಕೊಂಡು ವಿಶೇಷವಾದ ಹಾಯ್ಕುಗಳು ರಚಿಸಿದ್ದಾರೆ. ಇವರ ಚೊಚ್ಚಿಲ ಕವನ ಸಂಕಲನ ಹೊಂಗನಸಿನ ಹಾಯ್ಕುಗಳು, ವ್ಯಾಕರಣ ಕುಂಜ ಎನ್ನುವ ಪುಸ್ತಕ ಕೂಡ ಹೊರತಂದಿದ್ದಾರೆ. ಅಲ್ಲದೆ ಅಕ್ಷರ ಬೀಜ ಬಿತ್ತುವ ಜಾಗೃತಿ ಗೀತೆಗಳನ್ನು ಬರೆದು ಅವರ ಸ್ವ–ರಚಿತ ಧ್ವನಿಸುರುಳಿ ಹಾಡುಗಳನ್ನು ಹೊರತಂದಿದ್ದಾರೆ. ಅವುಗಳೆಂದರೆ ಹಕ್ಕಿಗೂಡು ಮಾಮರ, ಬಸವನೆ ಮಾಮರ, ಹಳ್ಳದ ಹೊಲದಾಗ, ಸಂಜೆಗೆನ್ನ ಪಯಣ, ಬೆಳಗುವ ಬೆಳ್ಳಿ, ಕೆರೆ ನೀರ ತರಲೆಂದು ಹಾಗೂ ದೀಪಿಕಾ ಪ್ರಮುಖವಾದವು. ಇವುಗಳಲ್ಲಿ ***ಬೆಳಗುವ ಬೆಳ್ಳಿ*** ಎಂಬ ಗೀತೆಯನ್ನು ಅವರ ಸಾಹಿತ್ಯ ರಚನೆಗೆ ಉದಾಹರಣೆಯಾಗಿ ಇಲ್ಲಿ ನೀಡಲಾಗಿದೆ.

*ಬೆಳಗುವ ಬೆಳ್ಳಿ ಚುಕ್ಕೆ ಮೂಡಿತೋ*
*ಬೆಳಗಾಯಿತು ಏಳಾ ॥*
*ಬಸವನ ಹುಡುಕೊಂಡು ಹೊಲಕ್ಕ ಹೊಗತಿನಿ*
*ಬುತ್ತಿಯ ನೀ ತಾರಾ ॥*
*ಬುತ್ತಿ, ನೀರು ಎಲ್ಲಾ ತರ್ತಿನಿ*
*ಬಂಡಿಯಾ ನೀ ಹೂಡಾ ಆ ಆ ಆ ಆ ॥*
*ಮುತ್ತಿನಂತಾ, ಮುತ್ತಿನಂತಾ ಹೆಂಡತಿ ನೀನು*
*ನಾವಿಬ್ಬರು ಜೋಡಾ, ನಾವಿಬ್ಬರು ಜೋಡಾ ॥*

*ಬುತ್ತಿ ಬೆಳೆಯುವಾ ಒಕ್ಕಲಿಗ*
*ಅವನೇ ಅನ್ನಾ ಕೊಡುವಾವಾ ॥*
*ಅವನಿಂದಾ ಬೆಳೆದವು ಎಷ್ಟೊ ಯುಗಾ*
*ಅವನಿಂದಾ ಬೆಳೆದವು ಎಷ್ಟೊ ಜಗ*
*ಮುತ್ತಿನಂತಾ, ಮುತ್ತಿನಂತಾ ಹೆಂಡತಿ ನೀನು*

ಹೀಗೆ ನೂರಾರು ಹಾಡುಗಳನ್ನು ಹಾಡುತ್ತಾ ಜನರ ಹೊಗಳಿಕೆಗೆ ಪಾತ್ರರಾಗಿದ್ದಾರೆ. ವಿವಿಧ ಭಾಷೆಯಲ್ಲಿ 40,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ ಗಾನ ಕಂಠೀರವ, ಸಂಗೀತ ಸಂಯೋಜಕರಾದ ಎಸ್. ಪಿ ಬಾಲಸುಬ್ರಹ್ಮಣ್ಯಂ ನವರು ನಡೆಸಿಕೊಡುವ ಈಟಿವಿ ಎಂಬ ಕನ್ನಡ ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಎದೆ ತುಂಬಿ ಹಾಡುವೆನು' ಎಂಬ ಸಂಗೀತ ಕಾರ್ಯಕ್ರಮದಲ್ಲಿ ಎಸ್‌ಪಿಬಿ ಅವರ ಜೊತೆಗೂಡಿ ವೇದಿಕೆ ಹಂಚಿಕೊಂಡು ಕೂಡುವ ಅವಕಾಶ ದೊರಕಿರುವುದಲ್ಲದೆ ಅನೇಕ ಹಾಡುಗಳನ್ನು ಹಾಡಿದ್ದಾರೆ. ನಟ, ಗಾಯಕ, ಕವಿ, ಸಾಂಸ್ಕೃತಿಕ ಸಂಘಟಕರೂ ಕೂಡ ಆಗಿದ್ದಾರೆ. ರಂಗಭೂಮಿ ನಟನೆ, ಸಂಗೀತ ಸಂಯೋಜನೆ, ಮೊದಲಾದುದರಲ್ಲಿ ಆಸಕ್ತಿ ಹೊಂದಿದ್ದಲ್ಲದೆ, ಸ್ಥಳಿಯ ಹಂತದಿಂದ ರಾಜ್ಯ ಮತ್ತು ಕೇಂದ್ರ ನಾಟಕ ರಂಗದ ಗಮನ ಸೆಳೆದು ಅಮೂಲ್ಯ ಸಾಧನೆ ಮಾಡಿದ್ದಾರೆ.

**ಉಪಸಂಹಾರ**

ಅತ್ಯುತ್ತಮ ಕಲಾವಿದರಾದ  ಶಂಭುಲಿಂಗ ವಾಲ್ದೊಡ್ಡಿರವರು ಅನೇಕ ನಾಟಕಗಳಲ್ಲಿ ತಮ್ಮ ಪ್ರಬುದ್ಧ ಅಭಿನಯ ನೀಡಿದ್ದಾರೆ. ಜೊತೆಗೆ ಗಾದಗಿ ಮಂಡಲ ಪಂಚಾಯತದ ಪ್ರಧಾನರಾಗಿ, ಸಮುದಾಯ ಸಮಿತಿಯ ಅಧ್ಯಕ್ಷರಾಗಿ, ವೇಗದೂತ ಶಿಕ್ಷಣ ಸಂಸ್ಥೆ ಹೀಗೆ ಮೊದಲಾದ ಸಂಸ್ಥೆಗಳ ಸಾರಥ್ಯ ಹೊತ್ತು ನಡೆಸುತಿದ್ದಾರೆ. ಕೇಂದ್ರ ಮಟ್ಟದ ಉತ್ತಮ ಶಿಕ್ಷಕ, ಎರಡು ಬಾರಿ ರಾಜ್ಯ ನಾಟಕ ಅಕಾಡೆಮಿ, ದೆಹಲಿಯ ದಲಿತ ಸಾಹಿತ್ಯ ಅಕಾಡೆಮಿ ನೀಡುವ ಡಾ. ಅಂಬೇಡ್ಕರ್ ಫೇಲೊಶಿಪ್, ಸುರಭಿ ಪ್ರಶಸ್ತಿ, 2009ರ ರಾಷ್ಟ್ರದ ಉತ್ತಮ ಶಿಕ್ಷಕ ಪ್ರಶಸ್ತಿ ಸೇರಿದಂತೆ ಹಲವಾರು ಸನ್ಮಾನಗಳಿಗೆ ಭಾಜನರಾಗಿದ್ದಾರೆ. ಬೀದರನ ಧರಿನಾಡು ಕನ್ನಡ ಸಮಿತಿ ಸೇವಾ ಸಂಘ ಪ್ರಕಾಶನದಲ್ಲಿ ದೇಶಾಚಿ ಹುಡುಗಿ ಮತ್ತು ಹಂಸಕವಿ ಸಂಪಾದಕತ್ವದಲ್ಲಿ ಸುಮಾರು 600 ಪುಟಗಳ ಅಭಿನಂದನಾ ಗ್ರಂಥ 2006 ರಲ್ಲಿ ಪ್ರಕಟಗೊಂಡಿದೆ.

**ಪರಾಮರ್ಶನಾ/ಆಕರ ಗ್ರಂಥಗಳು**


- ಶಂಭುಲಿಂಗ ವಾಲ್ದೊಡ್ಡಿ. (2020). ಹೊಸ ದಿಗಂತದ ಹಾಯಿಕುಗಳು. ಶೋಭಾ ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್. ವಾಲ್ದೊಡ್ಡಿ, ಬೀದರ್.
- ಶಂಭುಲಿಂಗ ವಾಲ್ದೊಡ್ಡಿ. (2019). ಹೊಂಗನಸಿನ ಹಾಯಿಕುಗಳು. ಶೋಭಾ ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್. ವಾಲ್ದೊಡ್ಡಿ, ಬೀದರ್.
- ಶಂಭುಲಿಂಗ ವಾಲ್ದೊಡ್ಡಿ. (2016). ಮಹಾತಾಯಿ. ಶೋಭಾ ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್. ವಾಲ್ದೊಡ್ಡಿ, ಬೀದರ್.
- ಶಂಭುಲಿಂಗ ವಾಲ್ದೊಡ್ಡಿ. (ಸಂ.) (2013). ಕನ್ನಡದಲ್ಲಿ ಹೊಸ ಸಂವೇದನೆಯ ಹಾಡುಗಳು. ಶೋಭಾ ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್. ವಾಲ್ದೊಡ್ಡಿ, ಬೀದರ್.


**ವಕ್ತೃ ಸಂದರ್ಶನ**

- ಶಂಭುಲಿಂಗ ವಾಲ್ದೊಡ್ಡಿ. (ಜೂನ್ 20, 2021) ಕಲಾವಿದರು ಮತ್ತು ನಿವೃತ್ತ ಮುಖ್ಯ ಶಿಕ್ಷಕರು, ವಯಸ್ಸು–65, ವಾಲ್ದೊಡ್ಡಿ ಗ್ರಾಮ, ಬೀದರ್ ತಾಲೂಕು ಮತ್ತು ಜಿಲ್ಲೆ.